<u>ಸಾಕ್ಷಿಯನ್ನು ದಿನಾಂಕಃ **24.06.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎನ್.ಎ. ವಕೀಲರಿಂದ:</u>

ಈ ದಾವೆಯನ್ನು ಹೂಡುವ ಮೊದಲು ನನ್ನ ತಂದೆಗೆ ಎಷ್ಟು ಸರ್ವೆ ನಂಬರ್ ಗಳಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಬಂದಿತ್ತು ಎಂದು ತಿಳಿದುಕೊಂಡಿದ್ದೇನೆ. ನನ್ನ ತಾತನ ಹೆಸರು ವೆಂಕಟಯ್ಯ ಉರುಫ್ ಬಜಯ್ಯ ಎಂದರೆ ಸಾಕ್ಷಿಯು ಕೇವಲ ಬಜಯ್ಯ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ 1 ನೇ ಪ್ರತಿವಾದಿಯ ತಂದೆಯ ಹೆಸರನ್ನು ಬಜಯ್ಯ ಅಲಿಯಾಸ್ ವೆಂಕಟಯ್ಯ ಎಂದು ವಾದ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನನ್ನ ತಾತನ ಹೆಸರನ್ನು ಮೂರನೇಪ್ರತಿವಾದಿ ಹೇಳಿ ಬರೆಸಿದ್ದ. 3 ನೇ ಪ್ರತಿವಾದಿಗೂ ನಮಗೂ ಸಂಬಂಧ ಚೆನ್ನಾಗಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಜೊತೆ ಇಂದಿಗೂ 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಇಂದು ನ್ಯಾಯಾಲಯದ ಮುಂದೆ ಇದ್ದಾರೆ, ಆದರೆ ಅವರು ಪ್ರತ್ಯೇಕವಾಗಿ ಬಂದಿರುತ್ತಾರೆ. 2 ನೇ ಪ್ರತಿವಾದಿ ಹೇಳಿದಂತೆ ದಾವೆಯನ್ನು ಸಲ್ಲಿಸಿದ್ದರೂ ಅದನ್ನು ಮೂರನೇ ಪ್ರತಿವಾದಿ ಮೇಲೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಆರ್ 19/93-94 ರ ಪ್ರಕಾರ ನನ್ನ ತಂದೆ ಅವರ ತಂದೆ ಮತ್ತು ಸಹೋದರರ ಜೊತೆ ವಿಭಾಗ

ಮಾಡಿಕೊಂಡ ನಂತರ ಖಾತೆ ಮಾಡಲು ಅರ್ಜಿ ನೀಡಿದಂತೆ ಸರ್ವೆ ನಂ.12/1 ರಲ್ಲಿ 26 ಗುಂಟೆ, ಸರ್ವೇ ನಂ.3 ರಲ್ಲಿ 1 ಎಕರೆ 6 ಗುಂಟೆ , ಸರ್ವೇ ನಂ.8 ರಲ್ಲಿ 1 ಎಕರೆ 3 ಗುಂಟೆ ಖಾತೆಯಾಗಿತ್ತು ಎಂದರೆ ಸರಿಯಲ್ಲ.

2. ಸರ್ವೇ ನಂ.8 ಆಕಾರ್ ಬಂದು ದುರಸ್ತಾಗಿ ಪೋಡಾಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಮೂಲತಃ ಲಕ್ಷ್ಮಿ ನಾರಾಯಣಸ್ವಾಮಿ ದೇವಸ್ಥಾನದ ಇನಾಂತಿ ಜಮೀನು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಜಿಲ್ಲಾಧಿಕಾರಿಗಳ ಆದೇಶ ಸಂ.2/2008-09 ರ ಪ್ರಕಾರ ದಿನಾಂಕ 08.10.2020 ರಂದು ಲಕ್ಷ್ಮಿ ನಾರಾಯಣಸ್ವಾಮಿ ದೇವಸ್ಥಾನದ ಹೆಸರಿಗೆ ಖಾತೆ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಬಗ್ಗೆ ರೆವಿನ್ಯೂ ನ್ಯಾಯಾಲಯದಲ್ಲಿ ಏನು ಆದೇಶವಾಗಿದೆ ಎಂದು ನಾವು ನೋಡಿರುವುದಿಲ್ಲ. ನನ್ನ ತಂದೆಯ ಹೆಸರಿಗೆ ಆಗಿದ್ದ ಖಾತೆ ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಬಗ್ಗೆ ನಾವು ಇತ್ತೀಚೆಗೆ ಕಂದಾಯ ದಾಖಲೆಗಳನ್ನು ನೋಡಿಲ್ಲ. ಸದರಿ ದಾಖಲೆಗಳನ್ನು ನೋಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

3. ನನ್ನ ಮದುವೆಯಾದಗಿನಿಂದಲೂ ಹೇರೂರು ಗ್ರಾಮಕ್ಕೆ ಲೆಕ್ಕವಿಲ್ಲದಷ್ಟು ಹೋಗಿ ಬಂದಿರುತ್ತೇನೆ. ಸರ್ವೆ ನಂ.3 ರ ಆಸ್ತಿ ಮೂಲತಃ ಲಕ್ಷ್ಮಿ ನಾರಾಯಣಸ್ವಾಮಿ ದೇವಸ್ಥಾನದ ಇನಾಂತಿ ಜಮೀನು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಜಿಲ್ಲಾಧಿಕಾರಿಗಳ ಆದೇಶ ಸಂ.2/2008-09 ರ ಪ್ರಕಾರ ದಿನಾಂಕ 08.10.2020 ರಂದು ಲಕ್ಷ್ಮಿ ನಾರಾಯಣಸ್ವಾಮಿ ದೇವಸ್ಥಾನದ ಹೆಸರಿಗೆ ಖಾತೆ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಲಕ್ಷ್ಮಿ ನಾರಾಯಣಸ್ವಾಮಿ ದೇವಸ್ಥಾನದ ಹೆಸರಿನಲ್ಲಿರುವ ಕಾರಣ ನಮಗೆ ಅದರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ಆದೇಶವನ್ನು ನಾವು ಪ್ರಶ್ನಿಸಿಲ್ಲ.

4. ದಿನಾಂಕ 10.12.1991 ರ ವಿಲ್ ನಂತೆ 3 ಮತ್ತು 4 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಸದರಿ ವಿಲ್ ಆದ ಆಸ್ತಿಗಳಲ್ಲಿ ನಮಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ಆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿನಾಂಕ 24.12.2018 ರಂದು 1 ನೇ ಪ್ರತಿವಾದಿ ಮತ್ತು ನನ್ನ ತಾಯಿ ತಿಮ್ಮಮ್ಮ ಇಬ್ಬರೂ ಸೇರಿ ಹೇರೂರು ಗ್ರಾಮದ ಚಿಕ್ಕರೇವಣ್ಣನವರ ಮಗ ದೊಡ್ಡರೇವಣ್ಣನಿಗೆ ದಾವಾ ಐಟಂ

ನಂ.3 ರಲ್ಲಿ 1 ಎಕರೆ 3 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರ ನೊಂದಣಿಯಾಗಿದ್ದು ಅದರಲ್ಲಿ ಬಂದ ಕ್ರಯದ ಪ್ರತಿಫಲವನ್ನು3 ರಿಂದ 5 ನೇ ಪ್ರತಿವಾದಿಗಳನ್ನು ಹೊರತುಪಡಿಸಿ, ನಾವುಗಳು, 1 ಮತ್ತು 2 ನೇ ಪ್ರತಿವಾದಿಗಳು ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಬಗ್ಗೆ3 ರಿಂದ 5 ನೇ ಪ್ರತಿವಾದಿಗಳು ತಕರಾರಿನಲ್ಲಿ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಕ್ರಯಕ್ಕೆ ಪಡೆದವರನ್ನುಪಕ್ಷಗಾರರನ್ನಾಗಿ ಮಾಡಬೇಕೆಂದು 3 ರಿಂದ 5 ನೇ ಪ್ರತಿವಾದಿಗಳು ಅರ್ಜಿ ಸಲ್ಲಿಸಿದ್ದು, ಅದಕ್ಕೆ ತಕರಾರು ನಮ್ಮ ವಕೀಲರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳ ರದ್ದತಿ ಕೋರದೆ ಕ್ರಯ ಪತ್ರಗಳ ವಿಚಾರವನ್ನು ಮರೆಮಾಚಿ ಈ ದಾವೇ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರಿಂದ 5ರವರಿಗೆ ವಿಲ್ ನಲ್ಲಿ ಬಂದ ಆಸ್ತಿಗಳನ್ನು ಸೇರಿಸಿ ಈ ದಾವೇ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ

.

ಕುಣಿಗಲ್.